# ವಿದ್ಯಾರಣ್ಯ ಕನ್ನಡ ಕೂಟ ಇಲಿನಾಯ್, ಯು.ಎಸ್.ಎ

## VIDYARANYA KANNADA KUTA Illinois, USA

ಆತ್ಮೀಯ ಸದಸ್ಯರೆ,

೨೦೦೭ನೇ ವರ್ಷದ ಯುಗಾದಿ ಹಬ್ಬದ ಕಾರ್ಯಕ್ರಮಗಳನ್ನು ಬಹಳ ಯಶಸ್ವಿಯಾಗಿ ನಡೆಸಿಕೊಟ್ಟಿದ್ದಕ್ಕೆ ನಿಮಗೆಲ್ಲಾ ನಾವು ಆಭಾರಿಯಾಗಿದ್ದೇವೆ. ನಿಮ್ಮಗಳ ಪ್ರೋತ್ಸಾಹ ಹಾಗೂ ಉತ್ಸಾಹದ ಫಲವಾಗಿ, ಈ ವರ್ಷದ ಸದಸ್ಯತ್ವವು ಕಳೆದ ಎರಡು ವರ್ಷಗಳಗಿಂತ ಅಧಿಕವಾಗಿದೆ. ಅದಕ್ಕಾಗಿ ನಮ್ಮ ಕೃತಜ್ಞತೆಗಳು. ಇದನ್ನು ಇನ್ನೂ ಹೆಚ್ಚಿಸಲು ನಿಮ್ಮಗಳ ಸಹಕಾರ ನಮಗೆ ಸದಾ ಅತ್ಯಗತ್ಯ. ಈ ದಿಸೆಯಲ್ಲಿ, ಮುಂದಾಳತ್ವ ವಹಿಸಲಿಚ್ಛಿಸುವ ಸದಸ್ಯರು ಸದಸ್ಯತ್ವ ಸಮಿತಿಯನ್ನು ಸಂಪರ್ಕಿಸಿ.

ಯುಗಾದಿಯ ಕಾರ್ಯಕ್ರಮಗಳ ಉತ್ಕೃಷ್ಟತೆಯ ಬಗ್ಗೆ ಬಹಳ ಉತ್ತೇಜಕರ ಪ್ರತಿಕ್ರಿಯೆಗಳು ಈಗಾಗಲೇ ಇ-ಅಂಚೆಯ ಮೂಲಕ ಬಂದಿವೆ. ಹಾಗೂ ಗುಣಮಟ್ಟವನ್ನು ಹೆಚ್ಚಿಸುವ ಸಲುವಾಗಿ ಕೆಲವು ಸಲಹೆಗಳೂ ಸಹ ಬಂದಿವೆ. ಕೆಲವರಿಗೆ ಈ ವರ್ಷ ಹೊಸದಾಗಿ ಪರಿಚಯಿಸಿದ 'ಹರಟೆ' ಕಾರ್ಯಕ್ರಮ ಮೆಚ್ಚುಗೆಯಾದರೆ ಇನ್ನು ಕೆಲವರಿಗೆ ಯುಗಾದಿ ಭೋಜನವು ತೃಪ್ತಿ ತಂದಿದೆ. ಮತ್ತು ಇನ್ನು ಕೆಲವರಿಗೆ ವಿಭಿನ್ನ ಶೈಲಿಯ ಕಿರು ನಾಟಕವು ಸಂತೋಷ ತಂದಿದೆ. ನಿಮ್ಮೆಲ್ಲರ ಒಟ್ಟಾರೆ ಅಭಿಪ್ರಾಯಗಳನ್ನು ಮತ್ತು ಆಯ್ದ ಕೆಲವು ಅನಿಸಿಕೆಗಳನ್ನು ನಮ್ಮ ದ್ವೈಮಾಸಿಕ ಪ್ರಕಟಣೆಗಳಲ್ಲಿ ಪ್ರಕಟಿಸುವ ಇಚ್ಛೆಯಿದೆ. ಒಟ್ಟಿನಲ್ಲಿ ತಮಗೆಲ್ಲರಿಗೂ ಯುಗಾದಿ ಹಬ್ಬದ ಆಚರಣೆಯು ತೃಪ್ತಿ ತಂದಿದೆ ಎನ್ನುವುದು ನಮ್ಮ ಅಭಿಪ್ರಾಯ. ಯಾವುದೇ ಸಮಾರಂಭದಲ್ಲಿ ಅಲ್ಪ ಸ್ವಲ್ಪ ಅಡಚಣೆಗಳಾಗುವುದು ಸಹಜವೆ. ಈ ಉಗಾದಿಯಲ್ಲಿ ತಾಂತ್ರಿಕ ತೊಂದರೆ ಕಂಡುಬಂದಾಗ, ಕೂಟದ ಸದಸ್ಯರು ಆ ಅಡಚಣೆಗಳನ್ನು ಸೂಕ್ತವಾಗಿ ಸಕಾಲಿಕವಾಗಿ ಪರಿಹರಿಸಿದ್ದಕ್ಕೆ ನಮ್ಮ ಧನ್ಯವಾದಗಳು.

ಮತ್ತೊಮ್ಮೆ ನಿಮಗೆಲ್ಲರಿಗೂ ಯುಗಾದಿಯ ಕಾರ್ಯಕ್ರಮಗಳನ್ನು ಸಕ್ರಿಯ ರೀತಿಯಲ್ಲಿ ಭಾಗವಹಿಸಿ ಯಶಸ್ವಿಯಾಗಿ ನಡೆಸಿಕೊಟ್ಟಿದ್ದಕ್ಕೆ ಧನ್ಯವಾದಗಳು.

-ವಿದ್ಯಾರಣ್ಯ ಕನ್ನಡ ಕೂಟ ಕಾರ್ಯಕಾರಿ ಸಮಿತಿ, ೨೦೦೭.

*****

*April 11, 2007*

*Dear Members,*

*We are grateful to all of you for making the 2007 Yugadi celebrations a great success. Thank you all. Your enthusiasm and encouragement has directly resulted in the increase in our membership in comparison to last two years. Your continued support is very much essential in improving the current membership level. Please contact the membership committee for more information on volunteering in our membership drive.*

*While we have received many encouraging emails about the programs, we also received few emails with suggestions to further improve the quality of certain programs. While some members expressed their appreciation for the new introductory program such as "HARATE", others have expressed their appreciation about the quality and the variety of the food, and few others liked the skit. We are planning to publish the collective opinions of all the emails received, in our upcoming issue of our bi-monthly e-newsletter "DINDIMA". We are happy to note that in general the overall impression from members have been encouraging. We appreciate and thank the efforts of all volunteers who actively rendered their helping hand, when we experienced technical difficulties during the Ugadi function.*

*Once again we thank all the members for their active participation in contributing to a great success of Ugadi 2007 celebrations.*

*- Vidyaranya Kannada Kuta Executive Committee, 2007*

♦♦♦♦♦